**Vijayavani**

**Date:** 18-06-2017 **Page No. 07**

Edition: Mysore **Language: Kannada**

# ಮೈಸೂರು ಎಸ್‌ಡಿಎಂ ಐಎಂಡಿಗೆ ಅಂತಾರಾಷ್ಟ್ರೀಯ ಮಾನ್ಯತೆ

■ ವಿಜಯವಾಣಿ ಸುದ್ದಿಜಾಲ ಬೆಳ್ತಂಗಡಿ

ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಟ್ರಸ್ಟ್ ಆಡಳಿತಕ್ಕೊಳಪಟ್ಟ ಮೈಸೂರಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವೆಲಪ್‌ಮೆಂಟ್(ಎಸ್‌ಡಿಎಂ ಐಎಂಡಿ) ನೀಡುತ್ತಿರುವ ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್(ಪಿಜಿಡಿಎಂ) ಶಿಕ್ಷಣಕ್ಕೆ ಅಮೆರಿಕದ ಅಕ್ರೆಡಿಟೇಶನ್ ಕೌನ್ಸಿಲ್ ಫಾರ್ ಬಿಸಿನೆಸ್ ಸ್ಕೂಲ್ಸ್ ಆ್ಯಂಡ್ ಪ್ರೋಗ್ರಾಮ್ಸ್ (ಎಸಿಬಿಎಸ್‌ಪಿ) ಅಂತಾರಾಷ್ಟ್ರೀಯ ಮಾನ್ಯತೆ ನೀಡಿದೆ.

ಮಾನ್ಯತೆ ಪ್ರದಾನ ಸಮಾರಂಭ ಜೂ.26ರಂದು ಅಮೆರಿಕದ ಲಾಸ್ ಏಂಜಲೀಸ್ ಬಳಿ ಇರುವ ಅನಹೆಮ್‌ನಲ್ಲಿ ನಡೆಯಲಿದೆ. ಸಂಸ್ಥೆ ಆಡಳಿತ ಮಂಡಳಿ ಅಧ್ಯಕ್ಷ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಸಂಸ್ಥೆ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್ ಭಾಗವಹಿಸುವರು.



ವಿಜಯವಾಣಿ ಚಿತ್ರ

ಜರ್ಮನಿಯ ಬರ್ಲಿನ್‌ನಲ್ಲಿ ಇಎಫ್‌ಎಂಡಿ ವಾರ್ಷಿಕ ಸಮ್ಮೇಳನದಲ್ಲಿ ಎಸ್‌ಡಿಎಂ ಐಎಂಡಿಯ ಪಿಜಿಡಿಎಂ ಶಿಕ್ಷಣಕ್ಕೆ ಇ-ಪಾಸ್ ಮಾನ್ಯತೆ ಪತ್ರವನ್ನು ಸಂಸ್ಥೆ ಆಡಳಿತ ಮಂಡಳಿ ಉಪಾಧ್ಯಕ್ಷ ಡಿ.ಸುರೇಂದ್ರ ಕುಮಾರ್ ಮತ್ತು ಸಂಸ್ಥೆ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಸ್ವೀಕರಿಸಿದರು.

ಈ ಸಂಸ್ಥೆ ಜಾಗತಿಕ ಮನ್ನಣೆಗೆ ಪಾತ್ರವಾದ ಬಿ. ಸ್ಕೂಲ್ ಆಗಿದ್ದು, ವಿಶ್ವದ ಬಿ.ಸ್ಕೂಲ್‌ಗಳು ಮತ್ತು ವಿಶ್ವವಿದ್ಯಾಲಯಗಳೊಂದಿಗೆ ವಿನಿಮಯ ಕಾರ್ಯಕ್ರಮ, ಸಂಶೋಧನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಸಹಭಾಗಿತ್ವಕ್ಕೆ ಅವಕಾಶ ದೊರಕಲಿದೆ. ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡುತ್ತಾರೆ. ಸಂಸ್ಥೆ ಪ್ರಾಧ್ಯಾಪಕರು ಕೂಡ ಜಾಗತಿಕ ಮಟ್ಟದಲ್ಲಿ ಮಾನ್ಯತೆ ಹೊಂದಿದ ಇತರ ಸಂಸ್ಥೆಗಳ ಅಧ್ಯಾಪಕರೊಂದಿಗೆ ವಿಚಾರ ವಿನಿಮಯ ನಡೆಸಲು ಮುಕ್ತ ಅವಕಾಶವಿದೆ.

**ಇ ಪಾಸ್ ಮಾನ್ಯತೆ:** ಜರ್ಮನಿಯ ಬರ್ಲಿನ್ ನಗರದಲ್ಲಿ ನಡೆದ ಯುರೋಪಿಯನ್ ಫೌಂಡೇಶನ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (EFMD) ವಾರ್ಷಿಕ ಸಮ್ಮೇಳನದಲ್ಲಿ ಎಸ್‌ಡಿಎಂ ಐಎಂಡಿಯ ಪಿಜಿಡಿಎಂ ಶಿಕ್ಷಣಕ್ಕೆ ಇ-ಪಾಸ್ (Education Policy and Accreditation Standard) ಮಾನ್ಯತೆ ನೀಡಲಾಯಿತು.

**EFMD Awards EPAS Accreditation to SDMIMD's PGDM**